Sri N.M. KOTRABASAIAH SOGI (Deputy Minister for Education).—

(*a*) the posts sanctioned in Government Order No. ED 42 MPE 69 dated 22nd June 1970 are filled up in accordance with the provisions of the Cadre and Recruitment Rules of the Department of Public Instruction.

(*b*) No.

(*c*) Does not arise in view of reply to (*a*).

Sri T. R. SHAMANNA.—By the way reply is given I am happy to learn that you are not recruiting directly. May I have an assurance from the Minister that the selection to those posts will be done purely on the basis of service and efficiency and there would be no nepotism and favouritism ?

†Sri N. M. KOTRABASAIAH SOGI.—The vacancies are filled up according to Cadre and Recruitment Rules.

Sri T. R. SHAMANNA.—May I know whether nepotism and favouritism will not play any part ?

Sri N. M. KOTRABASAIAH SOGI.—There is absolutely no scope for favouritism or nepotism. Appointments are made according to Cadre and Recruitment Rules.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ ಎಂದು ಹೇಳಿದ್ದಾರೆ., ಇದರಲ್ಲಿ ಡೈರೆಕ್ಟ್ ರಿಕ್ರೂಟ್‌ಮೆಂಟ್ ಎಷ್ಟು, ಪ್ರಮೋಷನರ್ ವೇಕೆನ್ಸಿ ಎಷ್ಟು ಇದಕ್ಕೆ ಯಾವ ತತ್ವವಿದೆ ? ರಾಜ್ಯದಲ್ಲಿ ಜಾರಿಯಲ್ಲಿರತಕ್ಕ ರಿಕ್ರೂಟ್‌ಮೆಂಟ್ ರೂರ್ಸ್ ಪ್ರಕಾರ 18 ಪರ್ಸೆಂಟ್ ಪರಿಶಿಷ್ಟವರ್ಗದವರಿಗೆ ಕೊಡತಕ್ಕ ವಿಧಾನವಿದೆಯೇ ಎಂಬುದನ್ನು ಹೇಳುತ್ತಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ, ಸೋಗಿ.—ಕ್ಲಾಸ್ 1 ಪೋಸ್ಟ್‌ನಲ್ಲಿ 25 ಪರ್ಸೆಂಟ್ ರಿಕ್ರೂಟ್‌ಮೆಂಟ್ ಮತ್ತು 75 ಪರ್ಸೆಂಟ್ ಪ್ರಮೋಷನ್ ಮೇರೆ ಮಾಡತಕ್ಕುದಿದೆ. ಕ್ಲಾಸ್ ಎರಡರಲ್ಲಿ 50 ಪರ್ಸೆಂಟ್ ರೆಕ್ರೂಟ್‌ಮೆಂಟ್ 50 ಪರ್ಸೆಂಟ್ ಪ್ರಮೋಷನ್ ಇದೆ. ಇದರೊಳಗೆ ಮಾನ್ಯ ಸದಸ್ಯರ ಅಭಿಪ್ರಾಯದ ಪ್ರಕಾರ ಶೇಕಡ 18 ರಷ್ಟನ್ನು ನಿಮ್ಮ ವರ್ಗದವರಿಗೆ ಕೊಡಬೇಕೆಂದು ಸರ್ವೇಸಾಮಾನ್ಯವಾದ ತತ್ವವಾಗಿದೆ, ಆ ಪ್ರಕಾರ ಕಾಯಿದೆಯಲ್ಲದೆ. ಅದಕ್ಕೆ ತಕ್ಕಂತೆ ನೇಮಕಗಳನ್ನು ಮಾಡುತ್ತಿದ್ದೇವೆ.

Rural Electrification in Hassan District

104. Sri H. B. JWALANAIAH (Hassan).—

Will the Chief Minister refer to replies furnished to unstarred question No. 18 (laid on 10th September 1969) on the Table and state:—

(*a*) the number of Villages taken up for Rural Electrification in Hassan District (Talukwise information may be furnished) ;

(*b*) the programme of the Electricity Board for taking up Rural Electrification in Malnad and Plainland areas ?

Sri VEERENDRA PATIL (Chief Minister).—

(*a*) 61 as in Annexure 'A' appended.

(*b*) The programme as finalised on the recommendation of concerned District Development Councils is to electrify 228 villages in Malnad and 867 villages in other areas, during 1970-71.

ANNEXURE—A

Village Electrification Programme 1970–71

District : Hassan.

Sl. No.	Name of the Taluk	No. of villages selected
1	Alur	5
2	Hassan	8
3	Arkalgud	8
4	Belur	6
5	Channarayapatna	7
6	Sakaleshpur	7
7	Holenarasipur	10
8	Arsikere	10
	Total	61

ಶ್ರೀ ಎಚ್. ಬಿ. ಜ್ಯಾಲನಯ್ಯ.—ಈ ವರ್ಷ ಹಾಸನ ಜಿಲ್ಲೆಯಲ್ಲಿ 61 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸಬೇಕೆಂಬ ಕಾರ್ಯಕ್ರಮವಿದೆ ಎಂದು ಹೇಳಿದ್ದಾರೆ. ಆಯಾ ವರ್ಷ ಮಾಡಬೇಕಾದ ಕೆಲಸವನ್ನು ಆಯಾ ವರ್ಷವೇ ಮಾಡದೇ ಸ್ಪಿರ್ ಓವರ್ ವರ್ಕ್ಸ್ ಎಂದು ತೆಗೆದುಕೊಂಡು ಹೋದ ವರ್ಷದ ಕೆಲಸವನ್ನು ಈ ವರ್ಷ ಮಾಡುತ್ತಿದ್ದಾರೆ. ಈ ಸಾಲಿನ ಕೋಟಾ ಜೊತೆಗೆ ಹೋದ ಸಾಲಿನ ಸ್ಪಿಲ್ ಓವರ್ ವರ್ಕ್ಸ್ ಸೇರಿಸಿಕೊಂಡು ಯಾವ ಗ್ರಾಮದಲ್ಲಿಯೂ ವಿದ್ಯುದೀಕರಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಉದಾಹರಣೆಗೆ ಹೋದ ಸಾಲಿನಲ್ಲಿ ನನ್ನ ಕ್ಷೇತ್ರದಲ್ಲಿ ಎರಡು ಗ್ರಾಮಗಳಿಗೆ ವಿದ್ಯುಚ್ಛಕ್ತಿ ಕೊಡಬೇಕೆಂದು ಮಾಡಿ, ಕೆಲಸವನ್ನು ಪೂರ್ತಿ ಮಾಡದೆ ಇದ್ದುದರಿಂದ ಈ ಸಲವೂ ಅದೇ ಗ್ರಾಮಗಳನ್ನು ತೆಗೆದುಕೊಂಡಿದ್ದಾರೆ. ಈ ರೀತಿ ಮಾಡದೆ ಈ ವರ್ಷದ ಕೋಟಾ ಜೊತೆಗೆ ಹೋದ ವರ್ಷದ ಸ್ಪಿರ್ ಓವರ್ ವರ್ಕ್ಸ್ ತೆಗೆದುಕೊಂಡು ಕೆಲಸ ಪೂರ್ತಿ ಮಾಡುವ ಹಾಗೆ ವಿದ್ಯುಚ್ಛಕ್ತಿ ಮಂಡಳಿಗೆ ಆದೇಶ ಕೊಡುತ್ತಾರೆಯೇ ?

†ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ಹೋದ ಸಲದ ಕಾರ್ಯಕ್ರಮದಲ್ಲಿ ಸೇರಿದಂಥ ಹಳ್ಳಿಗಳನ್ನು ಈ ಸಲದ ಕಾರ್ಯಕ್ರಮಗಳಲ್ಲಿ ಮತ್ತೆ ಸೇರಿಸಿ ಓವರ್ ಲ್ಯಾಪ್ ಮಾಡಿದ್ದರೆ ಅದರ ಬಗ್ಗೆ ನಾನು ಮಂಡಲಯ ಅಧ್ಯಕ್ಷರ ಜೊತೆಯಲ್ಲಿ ಚರ್ಚೆ ಮಾಡಿ ಯಾವುದು ಆ ರೀತಿ ಸೇರಿಸಲಾಗಿದೆ ಎಂದು ಕೇಳುತ್ತೇನೆ. 1970–71ರ ಕಾರ್ಯಕ್ರಮದಲ್ಲಿ ಇರುವುದರ ಜೊತೆಗೆ ಸ್ಪಿರ್ ಓವರ್ ವರ್ಕ್ಸ್ ಇದ್ದರೆ ಅದನ್ನೂ ಮುಗಿಸಬೇಕಾಗುತ್ತದೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ನ್ಯಾಷನರ್ ರೂರರ್ ವಾಟರ್ ಸಪ್ಲೈ ಸ್ಕೀಂ ಮಂಜೂರು ಮಾಡಿರುವ ಕೆಲವು ಗ್ರಾಮಗಳಿಗೆ ಮತ್ತು ಪಂಪ್‌ಸೆಟ ಗಳನ್ನು ಹಾಕಲು ಎಲ್ಲವನ್ನೂ ಸಿದ್ಧ ಮಾಡಿಕೊಂಡಿರುವ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡದೆ ತೊಂದರೆಯಾಗಿರುವುದರಿಂದ, ರೂರರ್ ವಾಟರ್ ಸಪ್ಲೈ ಏನಿದೆ ಅದನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿರುವುದರಿಂದ ವಿದ್ಯುಚ್ಛಕ್ತಿಯನ್ನು ಕೊಡಲು ಇಂತಹ ಗ್ರಾಮಗಳಿಗೆ ಆದ್ಯತೆ ಕೊಡಬೇಕೆಂದು ವಿದ್ಯುಚ್ಛಕ್ತಿ ಮಂಡಲಿಗೆ ಆದೇಶ ಕೊಡುತ್ತಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಯೋಜನೆಯನ್ನು ಮಂಜೂರು ಮಾಡುವುದಕ್ಕೆ ಮೊದಲು ಇದನ್ನೆಲ್ಲ ವಿಚಾರ ಮಾಡಲಾಗುತ್ತದೆ. ನ್ಯಾಷನರ್ ರೂರರ್ ವಾಟರ್ ಸಪ್ಲೈ ಸ್ಕೀಂ ಮಂಜೂರಾಗಿ ಇನ್ನೂ ಕಾರ್ಯಗತವಾಗದೆ ಇರುವಂಥ ಸಂದರ್ಭಗಳಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಅಂಥ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ರೂರರ್ ಎಲೆಕ್ಟ್ರಿಫಿಕೇಶನ್ನಿಗೆ ಏನಾದರೂ ಟಾರ್ಗೆಟ್ ನಿಗದಿ ಮಾಡಲಾಗಿದೆಯೇ? ಇಷ್ಟು ಹಳ್ಳಿಗಳನ್ನು ಪ್ರತಿ ವರ್ಷ ಎಲೆಕ್ಟ್ರಿಫೈ ಮಾಡಬೇಕು ಎಂದೇನಾದರೂ ಕಾರ್ಯಕ್ರಮವಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಪ್ರತಿ ಜಿಲ್ಲೆ ಮತ್ತು ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಒಂದು ಕಾರ್ಯಕ್ರಮವನ್ನು ಮಾಡಿದ್ದಾರೆ, ಒಂದು ಟಾರ್ಗೆಟ್ ನಿಗದಿ ಮಾಡಿದ್ದಾರೆ. ಆದರೆ ಈಗ ಬಂದಿರುವ ಕಷ್ಟವೆಂದರೆ ಮೆಟೀರಿಯಲ್ ಸಾಕಷ್ಟು ಪ್ರಮಾಣದಲ್ಲಿ ಅವರಿಗೆ ಸಿಕ್ಕುತ್ತಿಲ್ಲ. ಉಕ್ಕಿನ ಅಭಾವ ವಿಪರೀತವಾಗಿರುವುದರಿಂದ ಎಷ್ಟು ಕಾರ್ಯಕ್ರಮವನ್ನು ಇಟ್ಟುಕೊಂಡು ಮಾಡ ಬೇಕೆಂದಿದ್ದಾರೋ ಅಷ್ಟು ಮುಟ್ಟುವುದಕ್ಕೆ ಬಹಳ ಕಷ್ಟವಾಗುತ್ತದೆ ಎನ್ನುವ ಮಾತನ್ನು ಪದೇ ಪದೇ ನನಗೆ ಹೇಳುತ್ತಿದ್ದಾರೆ. ಉಕ್ಕು ಎಷ್ಟು ಪ್ರಮಾಣದಲ್ಲಿ ಬೇಕೋ ಅಷ್ಟು ಪ್ರಮಾಣದಲ್ಲಿ ಒದಗಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇನೆ ಮತ್ತು ನಮ್ಮ ಕೈಲಾಧಷ್ಟೂ ಪ್ರಯತ್ನ ಮಾಡುತ್ತಿದ್ದೇವೆ. ಈ ರೀತಿಯಾಗಿ ಟಾರ್ಗೆಟ್ ಏನು ಹಾಕಿದ್ದೇವೆ ಅದನ್ನು ಮುಟ್ಟುವುದಕ್ಕೆ ವಿಶ್ವ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಚ್. ಸಿದ್ಧವೀರಪ್ಪ.—ಇಡೀ ರಾಜ್ಯದಲ್ಲಿ ಇಪ್ಪೇ ವರ್ಷದಲ್ಲಿ ಗಮ್ಯಮಾಂತರ ಪ್ರದೇಶ ದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಎನ್ನುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೀರಿ. ಆ ರೀತಿ ಹಾಕಿಕೊಂಡರೂ ನಿಮ್ಮ ಕಾರ್ಯಕ್ರಮದ ಪ್ರಕಾರ ಎಷ್ಟು ವರ್ಷಗಳಲ್ಲಿ ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಕಾರ್ಯಕ್ರಮ ಸಂಪೂರ್ಣವಾಗುತ್ತದೆ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಜನರಲ್ ಕ್ವೆಶ್ಚನ್ ಕೇಳಿದ್ದಾರೆ. ಪ್ರತ್ಯೇಕವಾಗಿ ಕೇಳಿದರೆ ವಿವರಗಳನ್ನು ಒದಗಿಸಬಹುದು. ಇದಕ್ಕೆ ಸಂಬಂಧಪಟ್ಟಂತೆ ಒಂದು ಕಾರ್ಯಕ್ರಮ ವಿದ್ಯುಚ್ಛಕ್ತಿ ಮಂಡಲಿಯ ಹತ್ತಿರವಿದೆ. ಪ್ರತಿ ವರ್ಷ ಎಷ್ಟೆಷ್ಟು ಕೆಲಸ ಮಾಡ ಬೇಕು, ಎಷ್ಟು ವರ್ಷಗಳಲ್ಲಿ ಮುಗಿಸಬೇಕು ಎನ್ನುವ ಕಾರ್ಯಕ್ರಮ ಅವರ ಹತ್ತಿರವಿದೆ. ಆ ಮಾಹಿತಿ ನನ್ನ ಬಳಿ ಇಲ್ಲದೆ ಇರುವುದರಿಂದ ಮಾನ್ಯ ಸದಸ್ಯರಿಗೆ ಉತ್ತರ ಹೇಳುವುದಕ್ಕೆ ಸಾಧ್ಯ ವಾಗುತ್ತಿಲ್ಲ.

ಶ್ರೀ ಎಂ. ಕಲ್ಯಾಣ ರಾವ್.—ನಮ್ಮ ನೆರೆ ಪ್ರಾಂತದಲ್ಲಿ ಈಗಾಗಲೇ 80 ಪರ್ಸೆಂಟ್ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ಅವರಿಗೆ ಅಲ್ಲಿ ಮೆಟೀರಿಯಲ್ ಹೇಗೆ ಸಿಕ್ಕುತ್ತದೆ ಮತ್ತು ನಮ್ಮ ಎಲೆಕ್ಟ್ರಿಸಿಟಿ ಬೋರ್ಡಿಗೆ ಹೇಗೆ ಸಿಕ್ಕುವುದಿಲ್ಲ? ಮಾನ್ಯ ಜ್ಯಾಲನಯ್ಯನವರು ಹೇಳಿದ ಹಾಗೆ ವಾಟರ್ ಸಪ್ಲೈಗೆ ಬೇಕಾದ ಎಲ್ಲ ಕೆಲಸಗಳೂ ಪೂರ್ತಿಯಾಗಿದ್ದರೂ 18 ಪರ್ಸೆಂಟ್ ರಿಟರ್ನ್ ಬರದೇ ವಿದ್ಯುಚ್ಛಕ್ತಿ ಕೆಲಸವನ್ನು ಮಾಡುವುದಿಲ್ಲ ಎಂದು ಹೇಳುತ್ತಾರೆ. ಅದನ್ನು ಸರಿ ಪಡಿಸುವುದಕ್ಕೆ, ಬೇಗ ನೀರು ಒದಗಿಸುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತಾರೆಯೇ?

9-30 A.M.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳುತ್ತಾರೆ ನೆರೆ ರಾಜ್ಯಗಳಲ್ಲಿ ಆಂದರೆ ಮದ್ರಾಸ್ ಹೇಳುತ್ತಾರೆ ಎಂದು ಕಾಣುತ್ತೆ. ಉಳಿದ ಕಡೆ ಏನು ಇದೆ ಎಂದು ಹೇಳುವುದಕ್ಕಾಗು ವುದಿಲ್ಲ. ಆದರೆ ಮದ್ರಾಸ್‌ನಲ್ಲಿ ರೂರರ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಕೆಲವು ವರ್ಷಗಳಿಂದ ಪ್ರಾರಂಭವಾದುದಲ್ಲ. ಬಹಳ ವರ್ಷಗಳಿಂದ ಈ ರೂರರ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂನ್ನು ಅವರು ಜಾರಿ ಮಾಡಿಕೊಂಡು ಬಂದಿದ್ದಾರೆ. 1956 ರಿಂದ ನಮ್ಮಲ್ಲಿ ಎಲೆಕ್ಟ್ರಿಸಿಟಿ ಇರಲಿಲ್ಲ.

ಆದ್ದರಿಂದ 1956 ರಿಂದ 1966 ರವರೆಗೂ ಹೆಚ್ಚಿನ ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. 1964-65 ರಲ್ಲಿ ಶರಾವತಿ ಬಂದಿರುವುದರಿಂದ ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದಕ್ಕೆ ಮೊದಲು ಟ್ರಾನ್ಸ್‌ಮಿಷನ್ ಲೈನ್ಸ್, ಸಬ್‌ಟ್ರಾನ್ಸ್‌ಮಿಷನ್ ಲೈನ್ಸ್, ಸ್ಟೆಪ್‌ಡೌನ್ ಸ್ಟೇಷನ್ ಮುಂತಾದುವಕ್ಕೆ ಶಾಕಷ್ಟು ಹಣ ಖರ್ಚು ಮಾಡಿದ್ದೇವೆ. ಅದುದರಿಂದ ನಮ್ಮಲ್ಲಿ ಸಾಕಷ್ಟು ಎಲೆಕ್ಟ್ರಿಸಿಟಿ ಇರುವುದರಿಂದ ಆ ಕಾರ್ಯಕ್ರಮವನ್ನು ತೀವ್ರಗತಿಯಲ್ಲಿ ಮಾಡಬೇಕೆಂದು ಮಾಡಿದ್ದೇವೆ. ಹೋದವರ್ಷ ಸ್ಟೀಲ್ ಅಭಾವ ಇದ್ದುದರಿಂದ ಮಾಡಲಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಸಿದ್ದಯ್ಯ ಶಾಂತವೀರಯ್ಯ.—ನೆಕರ್ಾರದವರು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಿಕೊಡ ಬೇಕೆಂದು ಎಲೆಕ್ಟ್ರಿಸಿಟಿ ಬೋರ್ಡ್‌ನವರಿಗೆ ಆದೇಶ ಕೊಟ್ಟಿದ್ದಾಗ್ಯೂ ಕೂಡ ಅವರು ಮಾಡದೇ ಇದ್ದರೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಎಲೆಕ್ಟ್ರಿಸಿಟಿ ಬೋರ್ಡ್‌ನವರು ಪ್ರತಿಯೊಬ್ಬರಲ್ಲಿಯೂ ಎಷ್ಟು ಕೆಲಸ ಮಾಡಬೇಕೆಂದು ಒಂದು ಟಾರ್ಗೆಟ್ ಹಾಕಿಕೊಂಡಿದ್ದಾರೆ. ಅದರ ಪ್ರಕಾರ ಅವರು ಮಾಡಬೇಕು ಎಂದು ಹೇಳುತ್ತಾ ಇದ್ದೇವೆ. ಪೀರಿಯಾಡಿಕಲ್ ರಿವ್ಯೂ ಮಾಡುತ್ತಾ ಇದ್ದೇವೆ. ನಿಧಾನವಾದರೆ ಏತಕ್ಕೆ ನಿಧಾನವಾಗುತ್ತದೆ ಕಾರಣವೇನು ಎಂದು ಕೇಳುತ್ತೇವೆ. ದುಡ್ಡಿನ ಅಭಾವ ಇದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಮೆಟೀರಿಯಲ್ಸ್ ಅಭಾವವನ್ನು ಸರಿಪಡಿಸುವುದಕ್ಕೆ ಕೇಂದ್ರ ಸರ್ಕಾರದ ಸಹಕಾರ ನೋಡಿಕೊಂಡು ಮಾಡಬೇಕಾಗುತ್ತದೆ. ಅದಕ್ಕಾಗಿ ನಾನು ಟಾರ್ಗೆಟ್ ಮುಟ್ಟುವುದಕ್ಕೆ ನರ್ಪ್ರಯತ್ನವನ್ನೂ ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎ. ಆರ್. ಪಂಚಗಾವಿ.—1970-71 ನೇ ಸಾಲಿನಲ್ಲಿ ಕೆಲವು ಕಡೆ ಸಣ್ಣ ತಾಲ್ಲೂಕು ಗಳನ್ನು ತೆಗೆದುಕೊಂಡು ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಆಫ್ ವರ್ಕ್‌ನ್ನು ಬೇಗ ಮಾಡಿ ದ್ದಾರೆ. ಗೋಕಾಕ್ ಅಂತಹ ಕಡೆ ದೊಡ್ಡ ದೊಡ್ಡ ತಾಲ್ಲೂಕಿನಲ್ಲಿ ಒಂದೇ ಒಂದು ಹಳ್ಳಿಗೆ 2-3 ವರ್ಷ ತೆಗೆದುಕೊಂಡಿದ್ದಾರೆ. ಈ ರೀತಿ ವ್ಯತ್ಯಾಸ ಇರಲು ಕಾರಣ ಏನು ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಹೋದವರ್ಷ 1969 ರಲ್ಲಿ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದರು. ಮಾನ್ಯ ಸದಸ್ಯರು ಹೇಳಿರುವುದರಲ್ಲಿ ಒಂದು ಮಾತು ಇದೆ. ಒಂದು ಫೈನಾನ್ಷಿಯಲ್ ಟಾರ್ಗೆಟ್‌ನ್ನು ಫಿಕ್ಸ್ ಮಾಡಿದ್ದಾರೆ. ಪ್ರತಿಯೊಂದು ಜಿಲ್ಲೆಗೂ ಎಷ್ಟು ದುಡ್ಡು ಖರ್ಚಾಗುತ್ತದೆಂದು ಅಂದಾಜು ಮಾಡಿದ್ದಾರೆ. ಅದರ ಪ್ರಕಾರ ಏನಾಗುತ್ತದೆ ಎಂದರೆ ದೂರ ದೂರ ಹಳ್ಳಿಗಳಿಗೆ ತೆಗೆದುಕೊಂಡು ಹೋಗಿರಬಹುದು. ಒಂದೊಂದು ತಾಲ್ಲೂಕಿಗೆ 2-3 ಲಕ್ಷ ರೂಪಾಯಿ ಖರ್ಚಾಗಬಹುದು. ನಾವು ಬಡ್ಜೆಟ್‌ನಲ್ಲಿ 2-3 ಲಕ್ಷ ರೂಪಾಯಿ ಒದಗಿಸಿದ್ದರೆ ಅದು ಒಂದು ತಾಲ್ಲೂಕಿಗೆ ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಆಫ್ ವರ್ಕ್ಸ್ ಮಾಡುವುದಕ್ಕೆ ಬರುತ್ತದೆ. ಆದುದರಿಂದ ಅವರು ಫೈನಾನ್ಷಿಯರ್ ಟಾರ್ಗೆಟ್ ಹಾಕಿಕೊಂಡಿದ್ದಾರೆ. ಅದರಿಂದ ಆ ಭಾಗದಲ್ಲಿ ಹೆಚ್ಚು ಕೆಲಸ ಮಾಡಬೇಕಾಗಿದೆ. ಒಂದು ತಾಲ್ಲೂಕಿಗೆ 2-3 ಲಕ್ಷ ರೂಪಾಯಿ ವೆಚ್ಚವಾದರೆ ಅದರ 5 ಪಾಲು, 6 ಪಾಲು 10 ಪಾಲು ಉತ್ಪತ್ತಿ ಆಗಬಹುದು. ಒಂದೊಂದು ಹಳ್ಳಿಯಲ್ಲಿ 30-40-50 ಮನೆಗಳಿರುವ ಕಡೆ 2-3 ಮೈಲಿಯವರೆಗೆ ಇದ್ದರೆ ವಿದ್ಯುಚ್ಛಕ್ತಿ ಲೈನು ಹಾಕಿಕೊಂಡು ಹೋಗಬೇಕಾಗುತ್ತದೆ. ಅಂಥ ಕಡೆ ವೆಚ್ಚ ಜಾಸ್ತಿಯಾಗುತ್ತದೆ.

Sri H. N. NANJE GOWDA.—It is stated that the programme has to be finalised on the recommendation of the concerned District Development Council. I want to know whether the Government has consulted the Consultative Committee as per the provisions of the Act.

Sri VEERENDRA PATIL.—That Consultative Committee is for the entire State. The procedure that was adopted by the Electricity Board for the current year is that they invited suggestions and asked the District Development Councils to formulate the electrification programme. Naturally it depended upon the recommendations made by the District Development Council consisting of M.L.As., M.L.Cs, and Presidents of Taluk Boards.

ಶ್ರೀ ಐ. ಸೋಮಶೇಖರಪ್ಪ.—ಸ್ಯಾಮೆ, ರೂರರ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಇದೆಯೆಲ್ಲಾ ಇದಕ್ಕೆ ನಮ್ಮ ರಾಜ್ಯಕ್ಕೆ 70 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಅದೇ ಆಂಧ್ರ ಮತ್ತು ಗುಜರಾತ್‌ಗೆ 29 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಈ ರೀತಿ ಡಿಸ್ಕ್ರಿಮಿನೇಷನ್ ಇರುವುದರಿಂದ ಈ ರೂರರ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂಗೆ ಹೆಚ್ಚಿಗೆ ಹಣವನ್ನು ಪಡೆದುಕೊಂಡು ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆ ಈ ಇನ್‌ಫರ್ಮೇಷನ್ ಹೇಗೆ ಗೊತ್ತಾಯಿತೋ ನನಗೆ ಗೊತ್ತಿಲ್ಲ. ನಮಗೆ 70 ಲಕ್ಷ ರೂಪಾಯಿ ಬಂದು ಅವರಿಗೆ 29 ಕೋಟಿ ರೂಪಾಯಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಈ ರೂರರ್ ಎಲೆಕ್ಟ್ರಿಫಿಕೇಷನ್‌ನ್ನು ಕಾರ್ಪೊರೇಷನ್ ಮಾಡಿದ್ದು ಮೊನ್ನೆ ಮೊನ್ನೆ. ಈ ಕಾರ್ಪೊರೇಷನ್‌ನಿಂದ ಸಾಕಷ್ಟು ಪ್ರಮಾಣದಲ್ಲಿ ರಾಭ ಪಡೆಯಬಹುದು. ಅವರಿಂದ ಸಹಾಯ ಪಡೆಯಬೇಕು ಎನ್ನುವ ದೃಷ್ಟಿಯಿಂದ ಕೆಲವು ಪ್ರೋಗ್ರಾಂನ್ನು ಕಳುಹಿಸಿದ್ದೇವೆ. ಮಂಜೂರಾಗಿ ಬಂದಿದೆ. ಇನ್ನು ಕೆಲವು ಪ್ರೋಗ್ರಾಂ ಕಳುಹಿಸಿದ್ದೇವೆ. ಅವರಿಂದ ಸಾಕಷ್ಟು ಪ್ರಮಾಣದಲ್ಲಿ ಸಹಾಯ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವ ಗ್ರಾಮದಲ್ಲಿ ಜನಸಂಖ್ಯೆ ಕಡಿಮೆಯಾಗಿರುತ್ತದೋ ಅದನ್ನೇ ಆಧಾರವಾಗಿ ಇಟ್ಟುಕೊಳ್ಳದೆ ಇಷ್ಟು ತಾಲ್ಲೂಕುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಎನ್ನುವ ದೃಷ್ಟಿಯನ್ನಿಟ್ಟುಕೊಂಡು ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.— ಈಗ ಜನಸಂಖ್ಯೆ ಜಾಸ್ತಿ ಕಡಿಮೆ ಅನ್ನುವ ಪ್ರಶ್ನೆ ಅಲ್ಲ. ಈ ಕೆಲಸದಿಂದ ಮರೆನಾಡಿನಲ್ಲಿ 5 ಪರ್ಸೆಂಟು ರಿಟರ್ನ್ ಬರಬೇಕು, ಬಯಲುಸೀಮೆಯಲ್ಲಿ 5 ಪರ್ಸೆಂಟು ರಿಟರ್ನ್ ಬರಬೇಕು ಅಂತ ಇದೆ. ಮತ್ತು ಯಾವ ಹಳ್ಳಿಗೆ ಎಲೆಕ್ಟ್ರಿಸಿಟಿ ತೆಗೆದುಕೊಂಡು ಹೋದರೆ ಅಲ್ಲಿ ಸಾಕಷ್ಟು ಕನ್‌ನಂಷನ್ ಇರಬೇಕು, ಅಲ್ಲಿ ಸಾಕಷ್ಟು ಎಲೆಕ್ಟ್ರಿಸಿಟಿ ಬಳಕೆದಾರರು ಇರಬೇಕು. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬಳಕೆದಾರರು ಸಾಕಷ್ಟು ಉಪಯೋಗಿಸಿಕೊಳ್ಳದೆ ಆ ಪಂಚಾಯಿತಿಯಿಂದ 200-300 ರೂಪಾಯಿ ಬಂದರೆ ರೂರರ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂನಿಂದ ರಾಭ ಬರುವುದಿಲ್ಲ. ಅಪಾರ ಹಾನಿಯಾಗುತ್ತದೆ. ಆದುದರಿಂದ ಸ್ವಲ್ಪಮಟ್ಟಿಗಾದರೂ ರಿಟರ್ನ್ ಬಂದರೆ ಅಲ್ಲ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾವು ಹೇಳಿರುವ ಆಧಾರ ಇಟ್ಟುಕೊಂಡರೆ ಯಾವ ಗ್ರಾಮಕ್ಕೂ ಎಲೆಕ್ಟ್ರಿಸಿಟಿ ಕೊಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇಷ್ಟಿಷ್ಟು ಗ್ರಾಮಕ್ಕೆ ಕೊಡಬೇಕು ಎಂದು ಪ್ರೋಗ್ರಾಂ ಇಟ್ಟುಕೊಳ್ಳಬೇಕು ಇಲ್ಲದೆ ಹೋದರೆ ಹಳೆ ಮೈಸೂರು ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ಹಳೇ ಮೈಸೂರು ಹೊಸ ಮೈಸೂರು ಅನ್ನುವ ಪ್ರಶ್ನೆ ಬರುವುದಿಲ್ಲ. ಯಾವ ಯಾವ ಜಿಲ್ಲೆಯಲ್ಲ ರೂರರ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಆಗಿದೆ, ಯಾವ ಜಿಲ್ಲೆಯಲ್ಲಿ ಕೈಗೊಳ್ಳಬೇಕು ಅದರ ಪ್ರಶ್ನೆ ಬರುವುದಿಲ್ಲ. ನಾನು ಹೇಳುವುದು ಸ್ವಲ್ಪ ದುಡ್ಡಿನಲ್ಲಿ ಹೆಚ್ಚು ಏರಿಯಾಗಳನ್ನು ಎಲೆಕ್ಟ್ರಿಫಿಕೇಷನ್ ಮಾಡುವುದು ಒಳ್ಳೆಯದು. 1-2 ಹಳ್ಳಿಗಳನ್ನೇ ತೆಗೆದುಕೊಂಡು ಮಾಡುವುದಕ್ಕೆ ಸಾಧ್ಯವಿಲ್ಲ. ಅದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ಎಲ್ಲಾ ಹಳ್ಳಿಗಳನ್ನೂ ಕವರ್ ಮಾಡಬೇಕೇ, ಬಿಡಬೇಕೇ ಅನ್ನುವ ಪ್ರಶ್ನೆ ಅಲ್ಲ. ಎಲ್ಲಾ ಹಳ್ಳಿಗಳಿಗೂ ರೂರರ್ ಎಲೆಕ್ಟ್ರಿಫೀಕೇಷನ್ ಪ್ರೋಗ್ರಾಂ ಮಾಡಬೇಕು ಎಂದು ಗಮನದಲ್ಲಿಟ್ಟುಕೊಂಡು 100 ಪರ್ಸೆಂಟ್ ಅಷ್ಟು ಮಾಡಬೇಕು ಅನ್ನುವ ವಿಚಾರ ಇದೆ. ಈ ವಿಚಾರ ಎಲೆಕ್ಟ್ರಿಸಿಟಿ ಬೋರ್ಡ್‌ನವರಿಗೆ ಬಿಟ್ಟು ಬಿಡಬೇಕು. ಅವರಿಗೂ ಕೂಡ ಶೇಕಡ ನೂರರಷ್ಟು ಕೆಲಸ ಮಾಡಬೇಕು ಎನ್ನುವ ಕಾತುರತೆ ಇದೆ. ಆದರಂತೆ ಅವರು ಈ ರೂರರ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಹಾಕಿಕೊಂಡು ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ.

ಶ್ರೀಮತಿ ಲೀಲಾವತಿ ರೈ.—ಈಗ ಹಳ್ಳಿಗಳಲ್ಲಿ ಎಲೆಕ್ಟ್ರಿಸಿಟಿಯನ್ನು ಪಂಪುಗಳ ಆಧಾರದ ಮೇಲೆ ಹಾಕುತ್ತಿದ್ದಾರೆ ಎನ್ನುವ ರಿಪೋರ್ಟ್ ಬಂದಿದೆ. ಕೆರೆ ಬಾವಿಗಳು ಎಲ್ಲಿ ಇಲ್ಲ ಅಂತಹ ಕಡೆ ಎಲೆಕ್ಟ್ರಿಸಿಟಿಗೆ ಪಂಪ್‌ಸೆಟ್‌ಗೆ ಅವಕಾಶ ಇರುವುದಿಲ್ಲ. ಅಂತಹ ಗ್ರಾಮಗಳಿಗೆ ಎಲೆಕ್ಟ್ರಿಸಿಟಿ ಕೊಡುವುದಕ್ಕೆ ಅವಕಾಶ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಪಂಪುಸೆಟ್ಟುಗಳ ಆಧಾರದ ಮೇಲೂ ಎಲೆಕ್ಟ್ರಿಸಿಟಿ ಕೊಡುವ ಒಂದು ಸಪರೇಟ್ ಕಾರ್ಯಕ್ರಮ ಇದೆ. ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವುದಕ್ಕೆ

ಅದಕ್ಕೂ ಒಂದು ನಪರೇಟ್ ಕಾರ್ಯಕ್ರಮ ಇದೆ. ಪಂಪುಸೆಟ್ಟುಗಳು ಹಾಕುವ ವೇಳೆಯಲ್ಲಿ ಹಳ್ಳಿಗಳು ಸಮೀಪದಲ್ಲೇ ಇದ್ದರೆ ಎರಡನ್ನೂ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮಾನ್ಯ ಮುಖ್ಯಮಂತ್ರಿಗಳು ಹೇಳಿದರು : ಈ ರೂರಲ್ ಎಲೆಕ್ಟ್ರಿಫಿಕೇಷನ್‌ನಿಂದ ನಷ್ಟವಾಗುತ್ತಾ ಇದೆ ಎಂದು. ಒಂದು ವರ್ಷಕ್ಕೆ 1000 ಹಳ್ಳಿಗಳನ್ನು ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಬಹುದು. 1970-71 ನೇ ಸಾಲಿನಲ್ಲಿ ಮರೆನಾಡಿನಲ್ಲಿ 228 ಗ್ರಾಮಗಳು ಇತರೇ ಪ್ರದೇಶಗಳಲ್ಲಿ 868 ಗ್ರಾಮಗಳಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಿದ್ದಾರೆ. ಮರೆನಾಡಿನ ಪ್ರದೇಶ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಬಳಕೆಗೆ ಬೇಕಾಗಿರತಕ್ಕಂಥ ಪ್ರದೇಶ. ಆದುದರಿಂದ ಆ ಮರೆನಾಡಿನ ಪ್ರದೇಶಕ್ಕೆ ವಿದ್ಯುಚ್ಛಕ್ತಿಯನ್ನು ಹೆಚ್ಚಿಗೆ ಒದಗಿಸುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲಾ ಕಡೆಯೂ ಈ ಪ್ರೋಗ್ರಾಂನ್ನು ಕಾತುರತೆಯಿಂದ ಮಾಡಬೇಕಾಗಿದೆ. ಮರೆನಾಡಿನಲ್ಲಿ 228 ಗ್ರಾಮಗಳಿಗೆ ಕೊಟ್ಟಿದ್ದೇವೆ. ನಮ್ಮ ರಾಜ್ಯದಲ್ಲಿ ಮರೆನಾಡು ಪೂರ್ತಿ ಇಲ್ಲ. ಆದರೆ ಮರೆನಾಡಿನ ಪರಿಸ್ಥಿತಿ ಏನಿದೆ ಎಂದರೆ ಮರೆನಾಡಿನಲ್ಲಿ ದೂರ ದೂರ ಹಳ್ಳಿಗಳು ಇರುತ್ತವೆ. 4 ಮನೆಗೆ, 8 ಮನೆಗೆ, 10 ಮನೆಗೆ ಒಂದೊಂದು ಹಳ್ಳಿ ಇರುತ್ತವೆ. ಅಲ್ಲಿಗೆ ಟ್ರಾನ್ಸ್‌ಮಿಷನ್ ಲೈನ್ ಹಾಕಿಕೊಂಡು ಬರಬೇಕಾದರೆ ಅಲ್ಲರುವ ಥಿಕ್ ಫಾರೆಸ್ಟನ್ನು ಕಡಿದು ಹಾಕಬೇಕಾಗುತ್ತದೆ ಟ್ರಾನ್ಸ್‌ಮಿಷನ್ ಲೈನ್‌ಗೆ ಅಡ್ಡ ಬರದಂತೆ ಮರಗಳನ್ನು ಕಡಿದು ಹಾಕಬೇಕಾಗುತ್ತದೆ. ಆದುದರಿಂದ ಎಷ್ಟುಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಒಂದು ಪ್ಯಾಕ್ಟಿಕಲ್ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸಮಾಡುತ್ತಿದ್ದೇವೆ.

Nationalisation of bus routes in South Kanara District

Sri B. M. IDINABBA(Mangalore-2).—

122. Will the Minister for Transport be pleased to state :—

(*a*) the number of bus routes nationalised in South Kanara District together with their names ;

(*b*) the number of Government buses plying in the said routes ;

(*c*) whether private buses are plying in the routes other than the nationalised routes ;

(*d*) the names of such private Companies and the number of buses they are plying (Companywise figures may be furnished) ;

(*e*) when the routes in which private buses are plying will be nationalised ?

Sri MOHAMED ALI (Minister for Transport).—

(*a*) Three road sections consisting of 31 routes have been nationalised as indicated in the list appended.

(*b*) 95 buses of Mysore State Road Transport Corporation.

(*c*) Yes.